ಪ್ರಧಾನ ದಿವಾಣಿ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ ಹುಮನಾಬಾದ.

ಪಿ.ಸಿ.ಆರ್. ನಂ.150/2025
ಸಿ.ಡಬ್ಲ್ಯೂ-1

| | | |
|---|---|---|
| ಸಾಕ್ಷಿಯ ಹೆಸರು | - | ಸಾವಿತ್ರಿ ಗಂಡ ಮಂಜುನಾಥ |
| ವಯಸ್ಸು | - | 35 ವರ್ಷ |
| ಉದ್ಯೋಗ | - | ಮನೆಗೆಲಸ. |
| ವಾಸ | - | ಕಲಬುರ್ಗಿ. |

ದಿನಾಂಕಃ 01-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಫಿರಿಯಾದಿ ಪರ ಶ್ರೀ. ಕೆ.ವಿ.ಪಿ ವಕೀಲರಿಂದಃ

1 ನೇ ಆರೋಪಿತನು ನನ್ನ ಗಂಡ. 2 ನೇ ಆರೋಪಿತಳು 1 ನೇ ಆರೋಪಿತನ 2 ನೇ ಹೆಂಡತಿ. 3 ನೇ ಆರೋಪಿತಳು 1 ನೇ ಆರೋಪಿತನ ತಾಯಿ. 4 ನೇ ಆರೋಪಿತನು 1 ನೇ ಆರೋಪಿತನ ಸಹೋದರ. 5 ನೇ ಆರೋಪಿತನು 2 ನೇ ಆರೋಪಿತಳ ತಂದೆ. 6 ನೇ ಆರೋಪಿತಳು 2 ನೇ ಆರೋಪಿತಳ ತಾಯಿ. 7 ನೇ ಆರೋಪಿತನು 2 ನೇ ಆರೋಪಿತಳ ತಮ್ಮ.

ದಿನಾಂಕ 22-12-2008 ರಂದು ನನ್ನ ಮತ್ತು 1 ನೇ ಆರೋಪಿತನ ಮದುವೆಯು ಕಲಬುರ್ಗಿಯ ಅಂಬಾಭವಾನಿ ಕಲ್ಯಾಣ ಮಂಟಪ ಶಹಾಬಜಾರದಲ್ಲಿ ಹಿಂದು ಸಂಪ್ರದಾಯದ ಪ್ರಕಾರ ಆಗಿರುತ್ತದೆ. ಮದುವೆಯ ಸಮಯದಲ್ಲಿ ನನ್ನ ತಂದೆ 1 ನೇ ಆರೋಪಿತನಿಗೆ 1 ಲಕ್ಷ ರೂಪಾಯಿ ಹಂ ಮತ್ತು 10 ತೊಲೆ ಬಂಗಾರ, ಮನೆ ಸಾಮಾನುಗಳ್ಳನು ಉಡುಗೊರೆ ನೀಡಿರುತ್ತಾರೆ. ಆ ಮದುವೆ ಖರ್ಚನ್ನು ನನ್ನ ತಂದೆ ನೋಡಿಕೊಂಡಿರುತ್ತಾರೆ. ಮದುವೆಯಾದ ನಂತರ ನಾನು ಘಾಟಬೋರಾಳ ಗ್ರಾಮದಲ್ಲಿ 1 ನೇ ಆರೋಪಿತನೊಂದಿಗೆ 2 ವರ್ಷ ವಾಸವಿರುತ್ತೇನೆ. ಅಲ್ಲಿಂದ 2 ವರ್ಷಗಳ ನಂತರ ನಾನು ಮತ್ತು 1 ನೇ ಆರೋಪಿತನು ಬೆಂಗಳೂರಿಗೆ ಹೋಗಿ ವಾಸವಾಗಿರುತ್ತೇವೆ.

1 ನೇ ಆರೋಪಿತನು ಬಿ.ಎಮ್.ಟಿ.ಸಿ ಚಾಲಕ ಅಂತಾ ಕರ್ತವ್ಯ

ನಿರ್ವಹಿಸುತ್ತಾರೆ. ನಾವು ಸ್ವಲ್ಪದಿನಗಳು ಚೆನ್ನಾಗಿದ್ದೆವು. ನಂತರ 1 ನೇ ಆರೋಪಿತನು 3 ನೇ ಆರೋಪಿತಳ ಮಾತು ಕೇಳಿ ವರದಕ್ಷಿಣೆ ಕಿರುಕುಳ ನೀಡಲು ಆರಂಭಿಸಿದನು. ಲಾಕ್ ಡೌನ ಮುಗಿದ ನಂತರ 1 ನೇ ಆರೋಪಿತನು ನನ್ನನ್ನು ಕರೆದುಕೊಂಡು ಬಂದು ಘಾಟಬೋರಾಳ ಗ್ರಾಮಕ್ಕೆ ಹೋಗೋಣ ಎಂದು ಹೇಳಿ ನನ್ನ ತಾಯಿ ಮನೆಗೆ ಬಂದು ಬಿಟ್ಟಿರುತ್ತಾನೆ. ನನ್ನ ಬೆಂಗಳೂರು ಮನೆಯಲ್ಲಿದ್ದ ಸಾಮಾನುಗಳನ್ನು ಘಾಟಬೋರಳಕ್ಕೆ ತೆಗೆದುಕೊಂಡು ಹೋಗಿರುತ್ತಾನೆ. ನಂತರ 1 ನೇ ಆರೋಪಿತನು ನನ್ನ ಸಂಪರ್ಕದಲ್ಲಿರುವುದಿಲ್ಲ. ಆದ್ದರಿಂದ ನಾನು ಮಹಿಳಾ ಪೊಲೀಸ ಠಾಣೆ ಕಲಬುರ್ಗಿಗೆ ಹೋಗಿ ಕಿರುಕುಳದ ಬಗ್ಗೆ ದೂರು ನೀಡಿರುತ್ತೇನೆ.

ನಾನು ಕಲಬುರ್ಗಿಯ ಹೆಚ್ಚುವರಿ ಕೌಟುಂಬಿಕ ನ್ಯಾಯಾಲಯಲದಲ್ಲಿ ಪ್ರಕರಣ ದಾಖಲಿಸಿರುತ್ತೇನೆ. ಸದರಿ ಪ್ರಕರಣದಲ್ಲಿ ನ್ಯಾಯಾಲಯವು ರೂ. 5000/- ಜೀವನಾಂಶ ನೀಡಲು ಆದೇಶಿಸುತ್ತಾರೆ. ಇದೇ ವರ್ಷ ಫೆಬ್ರವರಿಯಲ್ಲಿ ನಾನು ನನ್ನ ಗಂಡನ ಮನೆಗೆ ಹೋದಾಗ ಬಸವರಾಜ ತಂದೆ ಗುರಣ್ಣಾ ಸಾ: ಸೂಗುರ ಮತ್ತು ವೀರಣ್ಣ ತಂದೆ ಚಂದ್ರಶೇಖರ ಸಾ: ಸಣ್ಣೂರು ಇವರು 1 ನೇ ಆರೋಪಿತನು 2 ನೇ ಆರೋಪಿತಳೊಂದಿಗೆ 3 ರಿಂದ 7 ನೇ ಆರೋಪಿತರ ಸಮಕ್ಷಮದಲ್ಲಿ ಮೋಳಕೇರಾ ಗ್ರಾಮದ ವೀರಭದ್ರೇಶ್ವರ ಗವಿಯಲ್ಲಿ 2022 ರಲ್ಲಿ ಹಿಂದು ಧಾರ್ಮಿಕ ಪದ್ಧತಿಯ ಪ್ರಕಾರ 2 ನೇ ಮದುವೆಯಾದ ಬಗ್ಗೆ ಮಾಹಿತಿ ನೀಡಿರುತ್ತಾರೆ. ಆದಾದ ನಂತರ ನಾನು ನನ್ನ ಮಾವ ತೀರಿಕೊಂಡಾಗ ಅಲ್ಲಿ ಹೋದಾಗ ನಾನು 1 ನೇ ಆರೋಪಿತನಿಗೆ ಪ್ರಶ್ನಿಸಿದಾಗ ಯಾವುದೇ ಉತ್ತರ ನೀಡಿರುವುದಿಲ್ಲ. ನಂತರ 2 ನೇ ಆರೋಪಿತಳು ನಾನು 1 ನೇ ಆರೋಪಿತನೊಂದಿಗೆ ಮದುವೆ ಆಗಿರುತ್ತೇನೆ ಎಂದು ತಿಳಿಸಿರುತ್ತಾಳೆ.

ಹಾಗಾಗಿ ನಾನು ಆರೋಪಿತರ ವಿರುದ್ಧ ಈ ದೂರನ್ನು ದಾಖಲಿಸಿ ಶಿಕ್ಷೆ ನೀಡಲು ಕೋರುತ್ತೇನೆ.

ಈಗ ನೋಡುತ್ತಿರುವ ದಾಖಲೆಯು ನನ್ನ ಮತ್ತು 1 ನೇ ಆರೋಪಿತನ ಮದುವೆಯ ಆಮಂತ್ರಣ ಪತ್ರಿಕೆ ಆಗಿರುತ್ತದೆ ಅದನ್ನು ಈಗ ನಿಪಿ-1 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಯು ಕಲಬುರ್ಗಿಯ ಹೆಚ್ಚುವರಿ ಕೌಟುಂಬಿಕ ನ್ಯಾಯಾಲಯಲದಲ್ಲಿ ಪ್ರಕರಣ ತೀರ್ಪಿನ ಪ್ರತಿ ಆಗಿರುತ್ತದೆ. ಅದನ್ನು ನಿಪಿ-2 ಎಂದು

ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಯು ನನ್ನ ಆಧಾರ ಕಾರ್ಡ್‌ನ ನಕಲು ಪ್ರತಿಯಾಗಿದ್ದು, ಅದನ್ನು ಈಗ ನಿಪಿ-3 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಯು 1 ನೇ ಆರೋಪಿತನ ಆಧಾರ ಕಾರ್ಡ್‌ನ ನಕಲು ಪ್ರತಿಯಾಗಿದ್ದು, ಅದನ್ನು ಈಗ ನಿಪಿ-4 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆಯು ಮದುವೆ ಸಮಯದ ಭಾವಚಿತ್ರವಾಗಿದ್ದು ಅದನ್ನು ಈಗ ನಿಪಿ-5 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ಓ.ಹೇ.ಕೇ.ಸ.ಅ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ,
ನ್ಯಾಯಿಕ ದಂಡಾಧಿಕಾರಿಗಳು, ಹುಮನಾಬಾದ.